ಇಸ್ತಿಹಾರ್ನಾಮೆ.

ತಾರೀಖು 27ನೆ ಜನವರಿ 1909.

ಎಡತೊರೆ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಜೋಡಿ ಚಾವಲಾಪುರ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿ ಗೋಸ್ಕರವಾಗಿ ಸದರಿ ಜೋಡಿ ಚಾವಲಾಪುರ ಗ್ರಾಮದಲ್ಲಿ 1909ನೆ ಏಪ್ರೆಲ್ ಮಾಹೆ 12ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ. ಮೇಲ್ಕಂಡ ತಾರೀಖಿನಲ್ಲಿ ಹರಾಜು ಅಜ್ಜರ್ಿ ಆದಲ್ಲಿ ಮೂರನೇ ದಿವಸ ಎಡತೊರೆ ತಾಲ್ಲೂಕು ಕಛೇರಿಯಲ್ಲಿ ಹರಾಜು ನಡಿಸಲ್ಪಡುತ್ತೆ.

ಹೆಚ್ಚು ತಪ್ಸೀಲಿಗೆ ಸ್ಯ1909ನೆ ಇಸವಿ ಫೆಬ್ರವರಿ 11ನೆ ಮಂಗ್ಳಾರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 81ನೆ ಪೇಜು ನೋಡತಕ್ಕದ್ದು.

ತಾರೀಖು 27ನೆ ಜನವರಿ 1909.

ಎಡತೊರೆ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಸರ್ವಮಾನ್ಯ ದಿಡ್ಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಎಡತೊರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಏಪ್ರೆಲ್ 5ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪ್ಸೀಲಿಗೆ ಸ್ಯ1909ನೆ ಇಸವಿ ಫೆಬ್ರವರಿ 11ನೆ ಮಂಗ್ಳಾರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 82ನೆ ಪೇಜು ನೋಡತಕ್ಕದ್ದು.

ತಾರೀಖು 29ನೆ ಜನವರಿ 1909.

ಹುಣಸೂರು ತಾಲ್ಲೂಕು ಪೆರಿಯಪಟ್ಟಣದ ಹೋಬಳಿಗೆ ಸೇರಿದ ಜೋಡಿ ಗುಡ್ಡೇನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಸದರಿ ಜೋಡಿ ಗುಡ್ಡೇನಹಳ್ಳಿ ಗ್ರಾಮದಲ್ಲಿ 1909ನೆ ಏಪ್ರೆಲ್ ಮಾಹೆ 8ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪ್ಸೀಲು ಬಗ್ಗೆ ಸ್ಯ 1909ನೆ ಇಸವಿ ಫೆಬ್ರವರಿ 11ನೆ ಮಂಗ್ಳಾರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 80ನೆ ಪೇಜು ನೋಡತಕ್ಕದ್ದು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

1908ನೆ ಇಸವಿ ಡಿಸೆಂಬರ್ 26ನೆ ತಾರೀಖು ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲು ಯವರ ಟೌನ್‌ಹೌರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ|| ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
2. ,, ಬಿ. ಸುಬ್ಬರಾಯರವರು (ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್‌ರವರು).
3. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
4. ,, ಎಂ. ಸಿ. ರಂಗೈಯ್ಯಂಗಾರ್‌ರವರು.
5. ,, ಎ. ಸುಬ್ಬಣ್ಣನವರು
6. ,, ಕೆ. ಚಂದ್ರಶೇಖರೈಯ್ಯನವರು.
7. ,, ಅಂಬಳೆ ಅಂಣಯ್ಯ ಪಂಡಿತರವರು.
8. ,, ಎಸ್. ಶ್ರೀಕಂಠೈಯ್ಯನವರು.
9. ,, ಎಂ. ನರಸುಹ್ಮಸ್ವಾಮಿಗಳವರು.
10. ,, ಎಂ. ಕೃಷ್ಣಪ್ಪಾಜಿ ಅರಸಿನವರು.
11. ,, ತಿರುವೆಂಗಡ ಮೊದಲಿಯಾರ್‌ರವರು.
12. ,, ಸೈದ್ ಮೊಹದ್ದೀ ಸಾಹೇಬರವರು.
13. ,, ಮಾದಪ್ಪನವರು.
14. ,, ಹಸೇನಲ್ಲಿಬೇಗ್ ಸಾಹೇಬರವರು.
15. ,, ರಹಿಮತ್ತುಲ್ಲಾ ಅಹಮ್ಮದ್ ಸೇಠರವರು.

ಗೈರ್ ಹಾಜರು.

1. ಮಿ|| ಎಂ. ಕಾಂತರಾಜೆ ಅರಸಿನವರು (ಪ್ರೆಸಿಡೆಂಟ್).
2. ,, ಎಂ. ವೆಂಕಟಕೃಷ್ಣಯ್ಯನವರು.
3. ,, ಅನಂತರಾಜೈಯ್ಯನವರು.

I. 1908ನೆ ಇಸವಿ ನವಂಬರು ಮಾಹೆಯ ಜಮಾ ಖರ್ಚು ಲೆಖ್ಕ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಖ್ಕಗಳು.

ಅನಿವಾರ್ಯದ ದಸೆಯಿಂದ ಆಡಿಟರವರು, ಗೈರ್‌ಹಾಜರಾದ್ದರಿಂದ ಲೆಖ್ಕಗಳನ್ನು ಮುಂದಿನ ತಿಂಗಳಿಗೆ ಅಜ್ಞರ್ಡ್ ಮಾಡಿದೆ.

II. ಡಿಸ್ಪೆನ್ಸರ್ಡ್ ಶಿಬ್ಬಂದಿಯನ್ನು ಇಟ್ಟುಕೊಳ್ಳತಕ್ಕ ವಿಷಯದಲ್ಲಿ ಹೆಲ್ತ್ ಆಫಿಸರವರಿಂದ ತಲಪಿರುವ 25—11—08ನೆ ಮುಕ್ಕಂ 1089ನೆ ನಂಬರ್ ಡಾಕೆಟ್ ಮತ್ತು ಇದಕ್ಕೆ ಸಂಬಂಧಪಟ್ಟ ನಡವಳಿಕೆ.

ಈ ಮಿಟಿಂಗಿನಲ್ಲಿ ಹೆಲ್ತ್ ಆಫಿಸರವರು ಬಾರದೆ ಇದ್ದದ್ದರಿಂದ ಈ ಸಂಬಂಧವಾದ ಎಲ್ಲಾ ವಿಷಯವನ್ನು ಚರ್ಚಿಸುವದಕ್ಕೆ ಅವಕಾಶವಿಲ್ಲದೆ ಮುಂದಿನ ತಿಂಗಳಿಗೆ ಅಜ್ಞರ್ಡ್ ಮಾಡಬೇಕಾಯಿತು. ಇತರ ಪರ್ಮ್ಯಾನೇಜಿಂಗ್ ಕಮಿಟಿ ಮಿಟಿಂಗು ಮತ್ತು ಕೌನ್ಸಿಲ್ ಮಿಟಿಂಗಿಗೆ ಕ್ರಮವಾಗಿ ಬರುವಂತೆ ಹೆಲ್ತ್ ಆಫಿಸರವರಿಗೆ ಪ್ರೆಸಿಡೆಂಟರವರು ದಯವಿಟ್ಟು ಬರೆಸಬೇಕು.

III. ಮೈಸೂರು ಷಹರಿನ ಲಷ್ಕರ್ ಮೊಹಲ್ಲಾದಲ್ಲಿರುವ ಹಿಂದುಸ್ತಾನಿ ಗರ್ಲ್ಸ್ ಸ್ಕೂಲ್ ವಗೈರೆ ಗ್ರಾಂಟನೇಡು ಕೊಡಿಸಿ ಕೊಡಬೇಕೆಂದು ಮಜಿಲೀಸ್ ರಿಫಾಹಿಲ್ ಮುಸಲ್ಮಾನಿ ಪ್ರೆಸಿಡೆಂಟರವರಿಂದ ತಲಪಿರುವ ಲೆಟರ್.

ಮ್ಯುನಿಸಿಪಲ್ ಸ್ಕೂಲ್ ಕಮಿಟಿ ಛೇರ್ಮನ್‌ರವರ ಅಭಿಪ್ರಾಯದ ಬಗ್ಗೆ ರಿಫರ್ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

IV. 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನ್ನಿಗನುಸಾರವಾಗಿ ಮ್ಯುನಿಸಿಪಲ್ ಕೌನ್ಸಿಲ್ಲಿನ ವಿಷಯಗಳನ್ನು ಚರ್ಚೆ ಮಾಡತಕ್ಕ ಬಾಬಿನಲ್ಲಿ ಕೊಂಚ ಬದಲಾವಣೆಯೊಡನೆ ರೂಲ್ಸು ಅನುಮೋದಿಸಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 28—11—08ನೆ ಮುಕ್ಕಂ 5057-8—Ml. 569-06-5ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

V. ಕಳೆದ ದಸರಾ ಮತ್ತು ಇಂಡಸ್ಟ್ರಿಯಲ್ ಎಗ್ಜಿಬಿಷನ್ನಲ್ಲಿ ನಿಯಾಮಕ ಮಾಡಿಕೊಂಡಿದ್ದ ಕರ್ನಸರ್ವೇಸು ಶಂಗಾಮಿ ಶಿಬ್ಬಂದಿ ಬಾಬತು 83-4-1ರ ಬಿಲ್ಲು ಸಮೇತ ಹೆಲ್ತ್ ಆಫಿಸರವರಿಂದ ತಲಪಿರುವ 28-11-08ನೆ ಮುಕ್ಕಂ 1111ನೆ ನಂಬರ್ ಡಾಕೆಟ್.

ಪ್ಯಾಸ್ ಮಾಡಿದೆ.

VI. ಮೈಸೂರು ಷಹರಿಗೆ ಎಲೆಕ್ಟ್ರಿಕ್ ಪವರ್ ಮೂಲಕ ಕಾವೇರಿ ನದಿಯಿಂದಲೇ ಸೀದಾ ನೀರು ಸರಬರಾಯಿ ಮಾಡಲು ಆಗಲಾರದೆಂತ ಚೀಫ್ ಇಂಜನಿಯರವರು ಅಭಿಪ್ರಾಯಪಡುತ್ತಾರೆಂದು ಗೌರ್ನಮೆಂಟಿನಿಂದ ಸಾದರಾಗಿರುವ 28—11—08ನೆ ಮುಕ್ಕಂ 5059-60—Ml. 140-08—4ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

VII. ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್‌ಸ್ಪೆಕ್ಟರುಗಳ ತಾಬೇದಾರೀ ವಿಷಯದಲ್ಲಿ ಸ್ಯಾನಿಟೆರಿ ಕಮಿಷನರವರ ಮತ್ತು ಕಡೂರು ಡಿಸ್ಟ್ರಿಕ್ಟ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ಪ್ರೆಸಿಡೆಂಟರವರ ನಡವಳಿಕೆ ಕಾಪಿನಿ ಅಭಿಪ್ರಾಯದ ಬಗ್ಗೆ ಗೌರ್ನಮೆಂಟಿನಿಂದ ಸಾದರಾಗಿರುವ 5—12—08ನೆ ಮುಕ್ಕಂ 5424-35—Ml. 42507—3ನೆ ನಂಬರ್ ಪ್ರೊಸೀಡಿಂಗ್ಸು.

ಬೋರ್ಡಿನವರ ಅಭಿಪ್ರಾಯ ಅವಶ್ಯಕವೇ ಎಂಬುವದನ್ನು ಡೆಪ್ಯುಟಿ ಕಮಿಷನರವರನ್ನು ವಿಚಾರಿಸಿ ತಿಳಿದುಕೊಂಡ ನಂತರ ಅವಶ್ಯವಿದ್ದರೆ ಈ ವಿಷಯವನ್ನು ಕೌನ್ಸಿಲ್ಲಿಗೆ ತರತಕ್ಕದ್ದೆಂದು ತೀರ್ಮಾನಿಸಿದೆ.

VIII. ಅರ್ಜಿಯಲ್ಲಿ ನಮೂದಿಸಿರುವ ಕಾರಣಗಳಿಗೋಸ್ಕರ ಮಾಹೇಯಾನಾ ಕಂಟ್ರಾಕ್ಟು ವೊಬಲಗನ್ನು ಕಮ್ಮಿ ಮಾಡಿಕೊಡಬೇಕೆಂದು ದೇವರಾಜ ಮಾರ್ಕೆಟ್ ಡೈಲೀಫೀಸ್ ಕಂಟ್ರಾಕ್ಟರ್ ಗಂಗೈಯ್ಯನು ಕೊಟ್ಟಿರುವ ಅರ್ಜಿ.

ಅರ್ಜಿದಾರನ ಪ್ರಾರ್ಥನೆಯಂತೆ ಕಂಟ್ರಾಕ್ಟು ವೊಬಲಗಿನಲ್ಲಿ ಕಮ್ಮಿ ಮಾಡುವದಕ್ಕೆ ಕೌನ್ಸಿಲ್ಲಿನವರಿಗೆ ಕಾರಣ ತೋರಿಬರುವದಿಲ್ಲವೆಂದು ತೀರ್ಮಾನಿಸಿದೆ.

IX. ಟ್ರಸ್ಟ್ಸು ಬೋರ್ಡಿನಿಂದ ಕಳುಹಿಸಿದ್ದ 3,530 ರೂಪಾಯಿನ ಅಂದಾಜಿಕ್ಕೆ ಬದಲಾಗಿ 3ನೆ ಡ್ರೈನೇಜ್ ಆವರಣದಲ್ಲಿ ಫ್ಲಡ್ ವಾಟರ್ ಡ್ರೈನ್ ಅಭಿವೃದ್ಧಿಗೋಸ್ಕರ ಬಂದು ಅಂದಾಜು ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 7—12—08ನೆ ಮುಕ್ಕಂ 5474-8—Ml. 229-07ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

X. ಅಪ್ಲಿಕೇಷನ್ನಲ್ಲಿ ನಮೂದಿಸಿರುವ ಕಾರಣಗಳಿಗೋಸ್ಕರ ಕರ್ನವೆರ್ಯಸ್ ಅಲೋರ್ಯನ್ಸ್ ಮಾಹೇಯಾನಾ 20 ರೂಪಾಯಿನಿಂದ 30 ರೂಪಾಯಿಗೆ ಜಾಸ್ತಿಮಾಡಿಕೊಡಬೇಕೆಂದು ಮ್ಯುನಿಸಿಪಲ್ ಎಗ್ಜಿಕ್ಯೂಟಿವ್ ಇಂಜನಿಯರವರು ಕೊಟ್ಟಿರುವ ಅಪ್ಲಿಕೇಷನ್.

ಮಾಹೆಯಾನ 20 ರೂಪಾಯಿನಿಂದ 30 ರೂಪಾಯಿಗೆ ಕರ್ನವೆರ್ಯನ್ಸು ಅಲೋರ್ಯನ್ಸು ಜಾಸ್ತಿ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

XI. ಕಳೆದ ದಸರಾವಲ್ಲಿ ಜಾಸ್ತಿಯಾಗಿ ನಿಯಾಮಕ ಮಾಡಿಕೊಂಡಿದ್ದ ಡಿಸ್ಪೆನ್ಸರ್ಡ್ ಕೂಲಿಗಳ ಬಾಬತು 42-7-7ರ ಬಿಲ್ಲು ಸಮೇತ ಹೆಲ್ತ್ ಆಫಿಸರವರಿಂದ ತಲಪಿರುವ 11—12—08ನೆ ಮುಕ್ಕಂ 972ನೆ ನಂಬರ್ ಡಾಕೆಟ್.

ಪ್ಯಾಸ್ ಮಾಡಿದೆ.

-XII. ಚಟ್ನಹಳ್ಳಿ ಎಕ್ಸ್‌ಟೆನ್ಷನ ಸಮೀಪ ಇರುವ ಮಹಮ್ಮದೀಯರ ಸ್ಮಶಾನವನ್ನು ಬೇರೆಕಡೆಗೆ ತಗೆದುಹಾಕತಕ್ಕ ವಿಷಯದಲ್ಲಿ ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡು ಛೇರ್ಮನ್‌ರವರಿಂದ ತಲಪಿರುವ 21-12-08ನೆ ನಮ್ಬರ್ 824ನೆ ನಂಬರ್ ಲೆಟರ್.

ಮಿ|| ರಹಿಮತ್ತುಲ್ಲಾ ಅಹಮ್ಮದ್ ಸೇಟರವರು, ಮಿ|| ಮೊಹದೀ ಸಾಹೇಬರವರು, ಮಿ|| ಹಸೇನಲ್ಲಿಜೀಗ ಸಾಹೇಬರವರು ಮತ್ತು ಮೈಸೂರು ತಾಲ್ಲೂಕು ಅಮಲ್ದಾರ್‌ರವರು ಸಹ ವುಳ್ಳ ಸಬ್ ಕಮಿಟಿಗೆ ಇನ್‌ಸ್ಪೆಕ್ಷನ್ ಮಾಡಿ ರಿಪೋರ್ಟು ಮಾಡಲು ರಿಫರ್ ಮಾಡತಕ್ಕದ್ದೆಂದು ತೀರ್ಮಾನಿಸಿದೆ.

ಎಂ. ಜಿ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ರ 1908—09ನೆ ಇಸವಿ ಮಿ|| ಅರ್ಜೀ ನಂಬರ್ 668.

ಅರ್ಜೀದಾರ್ರು ಶಿಡ್ಲಘಟ್ಟದಲ್ಲಿರುವ ದಿಬ್ಬಗಿರಿ ಬಸಪ್ಪ, ಈರಪ್ಪ, ಮುನಿರುದ್ರಮ್ಮ ಮೈನರಾದ ಶಿಡ್ಲಘಟ್ಟ ಸ್ಥಳದ ಈರಪ್ಪ ವಗ್ಗೈರೇರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಈರಪ್ಪ ವಗ್ಗೈರೇರಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕಿನಮೇಲೆ ಶಿಡ್ಲಘಟ್ಟ ಸ್ಥಳದ ಸದರೀ ಮೈನರಿನ ಆಸ್ತೀ ಕಾಪಾಡುವುದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ರ 1909ನೆ ಇಸವಿ ಫೆಬ್ರವರಿ ತಿಂಗಳು ತಾರೀಖು 26ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ರ 1909ನೆ ಇಸವಿ ಫೆಬ್ರವರಿ ತಿಂಗಳು 8ನೆ ತಾರೀಖಿನಲ್ಲಿ ಕೋರ್ಟ್ ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಇ. ಜಯರಾವ್‌ಮೈಯರ್, ಸಬ್ ಜಡ್ಜ್.

ತಿ. ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಸಿದ್ದಲಿಂಗಂಣನವರ ಮಕ್ಕಳು ಸಿದ್ದಲಿಂಗಮರಿದೇವರು ಇದರಿಂದ ತಿಳಿಸುವುದೇನಂದರೆ—

ಅವಿಭಕ್ತ ಕುಟುಂಬಿಯಾದ ನಮ್ಮ ಅಣ್ಣ ಭೋಗ ನಂದ್ಗಪ್ಪನವರ ಮಗ ಬಸವಣ್ಣನ ಹೆಂಡತಿ ಬಸವಮ್ಮನು ಮಕ್ಕಳಿಲ್ಲದವಳಾಗಿ ನನ್ನ ಪೋಷಣೆಯಲ್ಲಿಯೇ ಇದ್ದು, ಕೆಲವರು ತುಂಟಜನರ ದುರ್ಬೋಧನೆಯಿಂದ ಸ್ವತಂತ್ರಿಸಿ ನಡೆಯುತ್ತಾ ಸೋಸಲೆ ಗ್ರಾಮದಲ್ಲಿ ನನ್ನ ಸ್ವಾಧೀನಾನುಭವದಲ್ಲಿರುವ ಜಮೀನುಗಳ ಪೈಕಿ 1ನೆ ನಂಬರ್ ಖಾತೆಯು ತನ್ನ ಹೆಸರಿನಲ್ಲಿದೆ ಎಂಬದರಮೇಲೆ ಸರ್ವೆ ನಂಬರು 1, 7, 15-2, 643 ಜಮೀನುಗಳನ್ನು ಆಧಾರ, ಭೋಗ್ಯ, ಕ್ರಯ, ಗೇಣಿ ವೊದಲಾದ ವ್ಯವಹಾರ ನಡಿಸುವದಾಗಿ ತಿಳಿಯುಬರುತ್ತೆ. ಇವಳಿಗೆ ಈ ಹಕ್ಕು ಇರುವುದಿಲ್ಲವಾಗಿ ಮೇಲ್ಕಂಡ ಜಮೀನುಗಳ ಸಂಬಂಧವಾಗಿ ಅಥವಾ ಬೇರೆ ವಿಧವಾಗಿ ಇವಳು ಮಾಡಿದ ಲೇವಾದೇನಿಗೆ ನಾನು ಮತ್ತು ಕುಟುಂಬದ ಚರ, ಸ್ಥಿರ ಆಸ್ತಿಗಳು ಈಡಾಗಲಾರವೆಂದು ಸಮಸ್ತರಿಗೂ ಇದರಿಂದ ತಿಳಿಸಿರುತ್ತೇನೆ.

ತಾರೀಖು 9ನೆ ಫೆಬ್ರವರಿ 1909. ಸಿದ್ದಲಿಂಗಮರಿದೇವರು.